# ವಕ್ರಪಾದ : ಶಸ್ತ್ರಚಿಕಿತ್ಸೆಯಿಲ್ಲದೆ ಸರಿಪಡಿಸಲು ಸಾಧ್ಯ ಜಿಲ್ಲಾಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ

**ವಕ್ರಪಾದ ಸಮಸ್ಯೆಯು ಒಂದು ಅಥವಾ ಎರಡೂ ಪಾದಗಳಿಗೂ ಉಂಟಾಗಬಹುದು. ವಕ್ರಪಾದ ಉಂಟಾದವರಲ್ಲಿ ಮೊಣಕಾಲಿನಿಂದ ಕೆಳಗೆ ಪಾದವನ್ನೊಳಗೊಂಡು ಒಳ ಭಾಗಕ್ಕೆ ತಿರುಚಿಕೊಂಡಂತಿದ್ದು, ನಡೆಯಲು ಹಾಗೂ ಸಾಮಾನ್ಯ ಚಟುವಟಿಕೆಗಳನ್ನು ನಡೆಸಲು ಕಷ್ಟವಾಗುತ್ತದೆ. ಉಳಿದಂತೆ ಈ ವಕ್ರಪಾದದಿಂದ ನೋವು ಹಾಗೂ ಮತ್ತಿತರ ಯಾವುದೇ ಆರೋಗ್ಯ ಸಮಸ್ಯೆ ಉಂಟಾಗುವುದಿಲ್ಲ.**

ಸಾಮಾನ್ಯವಾಗಿ ಗರ್ಭಾವಸ್ಥೆಯಲ್ಲಿರುವಾಗಲೇ ಮಗುವಿಗೆ ವಕ್ರಪಾದ ಅಥವಾ ಕ್ಲಬ್‌ಫೂಟ್(**Club foot**) ಉಂಟಾಗಿರುತ್ತದೆ. ಹುಟ್ಟಿದ 500 ಮಕ್ಕಳಲ್ಲಿ ಒಬ್ಬರಿಗೆ ಈ ವಕ್ರಪಾದ ಸಮಸ್ಯೆ ಕಾಣಬಹುದು. ಭಾರತದಲ್ಲಿ ಪ್ರತಿ ವರ್ಷ 50ಸಾವಿರ ಮಕ್ಕಳು ಈ ಸಮಸ್ಯೆಯೊಂದಿಗೆ ಜನಿಸುತ್ತಾರೆ.

ವಕ್ರಪಾದ ಸಮಸ್ಯೆಯು ಒಂದು ಅಥವಾ ಎರಡೂ ಪಾದಗಳಿಗೂ ಉಂಟಾಗಬಹುದು. ವಕ್ರಪಾದ ಉಂಟಾದವರಲ್ಲಿ ಮೊಣಕಾಲಿನಿಂದ ಕೆಳಗೆ ಪಾದವನ್ನೊಳಗೊಂಡು ಒಳ ಭಾಗಕ್ಕೆ ತಿರುಚಿಕೊಂಡಂತಿದ್ದು, ನಡೆಯಲು ಹಾಗೂ ಸಾಮಾನ್ಯ ಚಟುವಟಿಕೆಗಳನ್ನು ನಡೆಸಲು ಕಷ್ಟವಾಗುತ್ತದೆ. ಉಳಿದಂತೆ ಈ ವಕ್ರಪಾದದಿಂದ ನೋವು ಹಾಗೂ ಮತ್ತಿತರ ಯಾವುದೇ ಆರೋಗ್ಯ ಸಮಸ್ಯೆ ಉಂಟಾಗುವುದಿಲ್ಲ.

ಆತಂಕ ಬೇಡ- ಪರಿಹಾರ ಸಾಧ್ಯ:

ವಕ್ರಪಾದ ವಿಕೃತಿಯನ್ನು ವೈದ್ಯಕೀಯವಾಗಿ **CTEV (Congenital taplipes equino varus)**ಎಂದು ಕರೆಯಲಾಗುತ್ತದೆ. ವಕ್ರಪಾದ ಉಂಟಾಗಲು ಕಾರಣವೇನೆಂದು ಇದುವರೆಗೂ ತಿಳಿದುಬಂದಿಲ್ಲ. ವಕ್ರಪಾದ ಸಮಸ್ಯೆಯು ಕೆಲವು ಬಾರಿ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್‌ನಲ್ಲಿ ಕಾಣಿಸದೆ ಮಗು ಜನಿಸಿದಾಗ ಹೆತ್ತವರು ವಿಸ್ಮಿತಗೊಳಗಾಗುವ ಸಾಧ್ಯತೆಯಿದೆ. ಸ್ಕ್ಯಾನಿಂಗ್ ವರದಿಯಲ್ಲಿ ಸಮಸ್ಯೆ ಕಂಡು ಬಂದವರು ಮಗುವನ್ನು ತೆಗೆಸಲು ಮುಂದಾಗುತ್ತಾರೆ. ಯಾರೇ ಆಗಲಿ ಆತಂಕ ಪಡದೆ ಮಗು ಜನಿಸಿದ ಕೂಡಲೇ ಕೀಲು ಮತ್ತು ಮೂಳೆ ತಜ್ಞ ವೈದ್ಯರನ್ನು ಸಂಪರ್ಕಿಸಿದಲ್ಲಿ 4 ರಿಂದ 6 ವಾರಗಳೊಳಗೆ ಪರಿಹಾರ ಕಂಡು ಕೊಳ್ಳಬಹುದಾಗಿದೆ.



ಪೋನ್ಸೆಟಿ ವಿಧಾನದಿಂದ ಸರಿಪಡಿಸಬಹುದು:

ವಕ್ರಪಾದ ಸಮಸ್ಯೆಯನ್ನು ಶಸ್ತ್ರಚಿಕಿತ್ಸೆ ಇಲ್ಲದೆ ಪಾನ್ಸೆಟಿ ವಿಧಾನ(ಶಸ್ತ್ರಚಿಕಿತ್ಸೆ ಇಲ್ಲದೆ ವಿಧಾನ)ದಿಂದ ಸರಿಪಡಿಸಲು ಸಾಧ್ಯವಿದೆ. ನಂತರ ವಿಶೇಷ ಬೂಟ್‌ಗಳನ್ನು ನೀಡಲಾಗುವುದು. ಈ ಚಿಕಿತ್ಸಾ ವಿಧಾನದಿಂದ ಉತ್ತಮ ಫಲಿತಾಂಶ ಕಂಡು ಬಂದಿದೆ. ಶಸ್ತ್ರಚಿಕಿತ್ಸೆಗೆ ಒಳಗಾಗದ ಕಾರಣ ಮಗುವಿನ ಪಾದದ ಮೇಲೆ ಯಾವುದೇ ಗಾಯದ ಕಲೆ ಇರುವುದಿಲ್ಲ.

ವಕ್ರಪಾದ ಮಗು ಜನಿಸಿದ ಕೂಡಲೇ ಸರಿಪಡಿಸಿ:

ಮಕ್ಕಳಲ್ಲಿ ಕಂಡು ಬರುವ ವಕ್ರಪಾದವನ್ನು ಮಗು ಜನನವಾದ ಕೂಡಲೇ ಸರಿಪಡಿಸದೇ ಹೋದರೆ ಭವಿಷ್ಯದಲ್ಲಿ ಮದುವೆಯಾಗಲು, ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು, ಉತ್ತಮ ಗುರಿ ಸಾಧಿಸಲು ತೊಂದರೆಯಾಗುತ್ತದೆ. ಅಲ್ಲದೆ ಅಂಗ ಊನ ಎಂಬ ಭಾವನೆಯಿಂದ ಸಮಾಜದಲ್ಲಿ ಕೀಳರಿಮೆ ಉಂಟಾಗುವ ಸಾಧ್ಯತೆ ಇರುತ್ತದೆ. ಈ ನಿಟ್ಟಿನಲ್ಲಿ ತಂದೆ-ತಾಯಂದಿರು ವಕ್ರಪಾದ ಶಾಪವಲ್ಲ ಎಂಬುದನ್ನು ಅರಿತು ವೈದ್ಯತಜ್ಞರಿಂದ ಚಿಕಿತ್ಸೆ ಕೊಡಿಸಿ ಮಕ್ಕಳ ಉತ್ತಮ ಭವಿಷ್ಯಕ್ಕೆ ನಾಂದಿಯಾಗಬೇಕು.

ಜಿಲ್ಲಾಸ್ಪತ್ರೆಯಲ್ಲಿ ವಕ್ರಪಾದಕ್ಕೆ ಉಚಿತ ಚಿಕಿತ್ಸೆ:

ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ **Servetogether** ಫೌಂಡೇಷನ್‌ನ ಸಹಕಾರದೊಂದಿಗೆ ತುಮಕೂರು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಕ್ರಪಾದ ಸಮಸ್ಯೆಯಿಂದ ಜನಿಸಿದ ಮಕ್ಕಳಿಗೆ ಕೀಲು ಮತ್ತು ಮೂಳೆ ತಜ್ಞರಾದ ಡಾ। ಬಿ.ಎಂ. ಲೋಹಿತ್ ಮತ್ತು ತಂಡದವರು ಪ್ರತಿ ಗುರುವಾರ ಬೆಳಗ್ಗೆ 9 ರಿಂದ ಮಧ್ಯಾಹ್ನ 12 ಗಂಟೆವರೆಗೆ ಉಚಿತವಾಗಿ ಚಿಕಿತ್ಸೆ ನೀಡಲಿದ್ದಾರೆ. ಚಿಕಿತ್ಸೆ ಪಡೆದ ಮಕ್ಕಳಿಗೆ **Servetogether Foundation**ನ ಗೋಪಿ ಬಾಲನಾಥನ್ ಅವರು ಸಂಸ್ಥೆ ವತಿಯಿಂದ ಉಚಿತವಾಗಿ ಶೂಗಳನ್ನು ನೀಡುತ್ತಾರೆ. ಮಕ್ಕಳ ಪೋಷಕರು ಈ ಸೇವೆಯನ್ನು ಪಡೆಯಲು ಮೊ.ಸಂ: 6364303131ಕ್ಕೆ ಕರೆ ಮಾಡಬಹುದೆಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ। ವೀರಭದ್ರಯ್ಯ ತಿಳಿಸಿದ್ದಾರೆ.

ವರದಿ: ಆರ್. ರೂಪಕಲಾ
ವಾರ್ತಾ ಇಲಾಖೆ,
ತುಮಕೂರು.